

## ಸಂವಿಧಾನದ ಆಶಯ ಅನುಷ್ಠಾನ ಆಗಿಲ್ಲ

**-ಪ್ರಿಯಾಂಕಾ ಆರ್**, ರೇಡಿಯೊ ಜಾಕಿ

ಸಮಾನತೆಯ ಆಶಯ ವ್ಯಕ್ತಪಡಿಸುವ ಸಂವಿಧಾನ ಸಮಾನ ಅವಕಾಶ ನೀಡಬೇಕು ಎಂದು ಹೇಳುತ್ತದೆ. ಎಲ್ಲಿ ಸಮಾನತೆ ಇದೆ? ಲೈಂಗಿಕ ಅಲ್ಪಸಂಖ್ಯಾತ ಸಮುದಾಯ ಯಾವ ಯಾವ ಅನುಕೂಲವನ್ನು ಅದರಿಂದ ಪಡೆದಿದೆ? ಸಂವಿಧಾನದ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವುದರಿಂದ ಲಾಭ ಇಲ್ಲ. ಸಂವಿಧಾನ ಸಂಪೂರ್ಣವಾಗಿ ಅನುಷ್ಠಾನ ಮಾಡುವುದರಿಂದ ಮಾತ್ರ ಅದನ್ನು ಗೌರವಿಸಿದಂತೆ ಆಗುತ್ತದೆ.




ನಾವು ಸಂವಿಧಾನದ ಪ್ರಕಾರ ನಡೆದುಕೊಳ್ಳದಿರುವುದೇ ಎಲ್ಲ ಸಮಸ್ಯೆಗೂ ಮೂಲವಾಗಿದೆ. ಅಂಬೇಡ್ಕರ್ ಕನಸು ಇನ್ನೂ ಈಡೇರಿಲ್ಲ. ಈಗಲೂ ಅಸಮಾನತೆಯೇ ಎದ್ದು ಕಾಣುತ್ತಿದೆ. ಪವಿತ್ರ ಗ್ರಂಥ ರೂಪದಲ್ಲಿ ನೋಡುವ, ಇಲ್ಲವೇ ಫೋಟೊ, ಪ್ರತಿಮೆ ಇಟ್ಟು ಪೂಜೆ ಮಾಡುವುದರಿಂದಲೂ ಪ್ರಯೋಜನ ಆಗುವುದಿಲ್ಲ. ಅಂಬೇಡ್ಕರ್ ತತ್ವ, ಸಂವಿಧಾನದ ಆಶಯವನ್ನು ಎಲ್ಲರೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ಮಾತ್ರ ಅದಕ್ಕೆ ಸಾರ್ಥಕತೆ ಬರುತ್ತದೆ.

ಇಂದಿಗೂ ಹಕ್ಕು ಮತ್ತು ರಕ್ಷಣೆಗಾಗಿ ಪ್ರತಿಭಟನೆ, ಹೋರಾಟಗಳು ಏಕೆ ನಡೆಯುತ್ತಿವೆ? ಸಾಮಾನ್ಯರಿಗೆ ಸಮರ್ಪಕ ಸೌಲಭ್ಯ ಸಿಕ್ಕರೆ ಅವರು ಬೀದಿಗೆ ಬರುವ ಅಗತ್ಯ ಬರುವುದಿಲ್ಲ. ಸರ್ಕಾರಿ ಕಚೇರಿಗಳಲ್ಲಿ ಕೆಲಸಗಳು ಸಂವಿಧಾನಬದ್ಧವಾಗಿ ನಡೆದರೆ ಜನ ಅಲೆದಾಡುವ ಪ್ರಸಂಗವೂ ಬರುತ್ತಿರಲಿಲ್ಲ. ಸಂವಿಧಾನದ ಮೂಲತತ್ವ ಎಲ್ಲರೂ ಸಮಾನರು. ಆದರೆ ಎಲ್ಲರನ್ನು ಸಮಾನರು ಎಂದು ಕಾಣುತ್ತಿರುವವರು ಯಾರು? ಜಾತಿ–ಧರ್ಮ ಸಂಘರ್ಷ ನಿರಂತರವಾಗಿದೆ. ಸರ್ಕಾರಿ ಕಾರ್ಯಕ್ರಮ, ಶಾಲೆ, ಕಾಲೇಜುಗಳಲ್ಲಿ ಸಂವಿಧಾನದ ಪೀಠಿಕೆಯನ್ನು ಓದಿ ಪ್ರಮಾಣವನ್ನು ತೆಗೆದುಕೊಳ್ಳುತ್ತೇವೆ. ಅದಕ್ಕಿಂತ ಸಂವಿಧಾನವನ್ನು ಎಲ್ಲರೂ ಓದಬೇಕು. ಸಂವಿಧಾನದ ತತ್ವಗಳನ್ನು ನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡರೆ ಮಾತ್ರ ಅದಕ್ಕೊಂದು ಮೌಲ್ಯ ನೀಡಿದಂತೆ ಆಗುತ್ತದೆ.




ನಮ್ಮಿಂದ ಶರಣಾಗತಿಯನ್ನು ಬಯಸುವುದಿಲ್ಲ; ಸಹಭಾಗಿತ್ವವನ್ನು ಬಯಸುತ್ತವೆ. ದೇವರ ಸನ್ನಿಧಿಯಲ್ಲಿ ಭಕ್ತ ಶಿರಬಾಗುತ್ತಾನೆ; ರಾಷ್ಟ್ರಗೀತೆ ಹಾಡುವಾಗ ನಾವು ಎದೆಯುಬ್ಬಿಸುತ್ತೇವೆ, ರಾಷ್ಟ್ರಧ್ವಜಕ್ಕೆ ತಲೆಯೆತ್ತಿ ವಂದಿಸುತ್ತೇವೆ. ಶರಣಾಗತಿಯ ಭಕ್ತಿಮಾರ್ಗ ಒಂದೆಡೆಯಾದರೆ, ಸಂವಿಧಾನದ ಶಕ್ತಿಮಾರ್ಗ ಇನ್ನೊಂದೆಡೆ. ದೇವರು–ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ತರತಮ ಭಾವಗಳ ನಿವಾರಣೆಗೆ ಸಂವಿಧಾನದ 'ಶಕ್ತಿಮಾರ್ಗ'ವೇ ಮದ್ದು.

ಸಂವಿಧಾನ ಭಯವನ್ನು ಸೃಷ್ಟಿಸುವುದಿಲ್ಲ. ಹಾಗೆಯೇ ಸ್ವಚ್ಛಂದತೆಗೆ ಅಭಯವನ್ನೂ ನೀಡುವುದಿಲ್ಲ. ಎಲ್ಲ ನಾಗರಿಕರು ಪರಸ್ಪರ ಗೌರವದಿಂದ ಬಾಳಲಿಕ್ಕೆ ಅವಕಾಶವನ್ನು ಕಲ್ಪಿಸುವುದರಲ್ಲಿ ಸಂವಿಧಾನದ ಹಿರಿಮೆಯಿದೆ. ಜನರು ನಿರಂತರವಾಗಿ ರೂಢಿಸಿಕೊಳ್ಳಬೇಕಾದ ಮಾನವೀಯತೆಯ ನೆಲೆಗಟ್ಟಿನ ಜೀವನವಿಧಾನವನ್ನು ಸಂವಿಧಾನ ಪ್ರತಿಪಾದಿಸುತ್ತದೆ. 'ಸಾಂವಿಧಾನಿಕ ನೈತಿಕತೆ ಎನ್ನುವುದು ಸಹಜ ಭಾವನೆಯಲ್ಲ. ಅದನ್ನು ಬೆಳೆಸಬೇಕು. ನಮ್ಮ ಜನರು ಇನ್ನೂ ಕಲಿಯಬೇಕಾಗಿದೆ ಎಂಬುದನ್ನು ನಾವು ಅರಿತುಕೊಳ್ಳಬೇಕು' ಎನ್ನುವ ಅಂಬೇಡ್ಕರ್ ಅವರ ಮಾತು, ಸಂವಿಧಾನ ನಮ್ಮ ನಡೆ–ನುಡಿಯಲ್ಲಿ ವಿಕಾಸಗೊಳ್ಳುವಂತಹದ್ದು ಎನ್ನುವುದನ್ನು ಸೂಚಿಸುವಂತಿದೆ.

ದೇವರು–ಧರ್ಮದ ಹೆಸರಿನಲ್ಲಿ ನಾಗರಿಕರನ್ನು ಗುರ್ತಿಸುವ ವಿಧಾನಕ್ಕೆ ಪರ್ಯಾಯವಾಗಿ, ಸಂವಿಧಾನವನ್ನೇ ಧರ್ಮ ಎಂದು